ಅ) 1997-98 ರಿಂದ ಬಾಕಿ ಇದೆ.

ಇ) ಅನುದಾನದ ಲಭ್ಯತೆಯ ಮೇರೆಗೆ ಹಣ ಭರವಸೆ ಪತ್ರ ಬಿಡುಗಡೆಯನ್ನು ಆಧರಿಸಿ ಹಂತ ಹಂತವಾಗಿ ಬಿಲ್ಲುಗಳನ್ನು ಪಾವತಿಸಲಾಗುತ್ತಿದೆ.

ತೀರ್ಥಹಳ್ಳಿ ತಾಲ್ಲೂಕು ಏತ ನೀರಾವರಿ ಯೋಜನೆಗಳ ವಿದ್ಯುತ್ ಬಾಕಿ

743(872) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕು ಏತ ನೀರಾವರಿ ಯೋಜನೆಗಳ ವಿದ್ಯುತ್ ಬಾಕಿ ಮೊತ್ತ ಎಷ್ಟು?

ಆ) ಬಾಕಿ ತುಂಬದೆ ಈ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದರಿಂದ ಬೆಲೆ ಹಾನಿಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಬಾಕಿ ಹಣವನ್ನು ಯಾವಾಗ ಸಂದಾಯ ಮಾಡಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಒಟ್ಟು ಆರು ಏತ ನೀರಾವರಿ ಯೋಜನೆಗಳಿದ್ದು ಅವುಗಳ ಬಾಕಿ ಮೊತ್ತವು ರೂ. 4,17,366-00 ಇರುತ್ತದೆ.

ಆ) 01.07.2002 ರಿಂದ 19.09.2002 ರವರೆಗೆ ಮಾತ್ರ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿತ್ತು. ಆ ಸಮಯದಲ್ಲಿ ಮಳೆಗಾಲವಾದ್ದರಿಂದ ಬೆಳೆ ಹಾನಿಯಾಗಿರುವುದಿಲ್ಲ.

ಇ) ಹಣವನ್ನು ಶೀಘ್ರವೇ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಕೊರತೆ

744(874) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ರಾಜ್ಯದ ವಾಣಿಜ್ಯ ತೆರಿಗೆ ಸಂಗ್ರಹದ ಗುರಿ ಎಷ್ಟು ;

ಆ) ಇದುವರೆಗೂ ಸಾಧಿಸಿದ ಪ್ರಗತಿ ಎಷ್ಟು; ಕೊರತೆಯಾಗಿದ್ದಲ್ಲಿ ಕಾರಣವೇನು;

ಇ) ಈ ಕೊರತೆಯನ್ನು ಸರಿದೂಗಿಸಲು ಸರ್ಕಾರದ ಪರ್ಯಾಯ ತಂತ್ರವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ರೂ. 7520.94 ಕೋಟಿಗಳು

ಆ) 2003ರ ಫೆಬ್ರವರಿ ಅಂತ್ಯದವರೆಗೆ ಸಾಧಿಸಿದ ಪ್ರಗತಿ ರೂ. 5681.94 ಕೋಟಿಗಳು. ಈ ಕೆಳಕಂಡ ಕಾರಣಗಳಿಂದ ಪ್ರಗತಿಯಲ್ಲಿ ಸ್ವಲ್ಪ ಕೊರತೆಯಾಗಿದೆ;

ಆಯವ್ಯಯ ಮಂಡಣೆಯ ನಂತರ ಮೆಣಸು, ಏಲಕ್ಕಿ, ರಬ್ಬರ್, ಟೈರ್ಸ್ ಮತ್ತು ಟ್ಯೂಬ್, ಸಿದ್ಧಪಡಿಸಿದ ಉಡುಪುಗಳು ಮುಂತಾದವುಗಳ ತೆರಿಗೆ ದರ ಇಳಿಸಿದ್ದರಿಂದ, ಕೃಷಿ ವರಮಾನ ತೆರಿಗೆ ಪಾವತಿದಾರರಿಗೆ ತೆರಿಗೆ ಮುಂದೂಡಿಕೆ ಸೌಲಭ್ಯ ಒದಗಿಸಿದ್ದರಿಂದ, ಕಚ್ಚಾ ವಸ್ತುಗಳು ಮುಂತಾದವುಗಳ ಮೇಲೆ ಪ್ರವೇಶ ತೆರಿಗೆ ರದ್ದು ಪಡಿಸಿದ್ದರಿಂದ, ಬೃಹತ್ ಕೈಗಾರಿಕೆಗಳಿಗೆ ಪ್ರೋತ್ಸಾಹ ಧನದಲ್ಲಿ ಉಪಯೋಗ ಹೆಚ್ಚಳದಿಂದ, ವಹಿವಾಟು ತೆರಿಗೆ ರದ್ದುಪಡಿಸಿದ್ದರಿಂದ, ಮಾರ್ಕೆಟ್ ಬೆಲೆಗಳಲ್ಲಿ ಪೆಟ್ರೋಲಿಯಂ ಕಂಪೆನಿಗಳು ವಹಿವಾಟು ನೀತಿ ಬದಲಾವಣೆ

ಪರಿಣಾಮಗಳಿಂದಾಗಿ ಬೆಲೆ ಸ್ಥಿರೀಕರಣವಾದ್ದರಿಂದ, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ಮಾಹೆಯಲ್ಲಿ ತಮಿಳು ಚಲನಚಿತ್ರ ನಿಂತಿದ್ದರಿಂದ ಮತ್ತು ಗುಟ್ಕಾ ಮೇಲಿನ ವೈಭವ ತೆರಿಗೆಯ ಮೇಲೆ ಸರ್ವೋಚ್ಚ/ಉಚ್ಚ ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಮುಂತಾದವುಗಳಿಂದ.

ಇ) ಸಂಗ್ರಹಣೆಯ ಕೊರತೆ ಸರಿದೂಗಿಸಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.

1. ಹಿಂದಿನ ವರ್ಷದ ಸಂಗ್ರಹಣೆ ಮೇಲೆ ಶೇ. 15 ರಷ್ಟು ಬೆಳವಣಿಗೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
2. ಹಳೇ ಬಾರಿ ವಸೂಲಿಗೆ ಟಾಸ್ಕ್ ಫೋರ್ಸ್ ತಂಡಗಳ ರಚನೆ ಹಾಗೂ ವಸೂಲಾಗಬಹುದಾದ ಬಾಕಿ ವಸೂಲಿಗೆ ತೀವ್ರ ಕ್ರಮ ಕೈಗೊಳ್ಳುವುದು.
3. ಬಚ್ಚಿಟ್ಟ ವಹಿವಾಟಿನ ಮೇಲೆ ತೆರಿಗೆ ವಸೂಲಿಗೆ ಗುಪ್ತದಳದ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸುವುದು.
4. ಹೆಚ್ಚು ವಹಿವಾಟು/ತೆರಿಗೆ ಭಾಧ್ಯತೆ ಒಳಗೊಂಡ ಕರನಿರ್ಧರಣೆ ಪ್ರಕರಣಗಳ ಶೀಘ್ರ ವಿಲೇವಾರಿ ಮಾಡಿ ತೆರಿಗೆ ವಸೂಲಿಗೆ ಸೂಕ್ತ ಕ್ರಮ ಕೈಗೊಳ್ಳುವುದು.
5. ನ್ಯಾಯಾಲಯಗಳಲ್ಲಿ ಬಾಕಿ ಇರುವ ಹೆಚ್ಚು ತೆರಿಗೆ ಒಳಗೊಂಡ ಪ್ರಕರಣಗಳ ಶೀಘ್ರ ವಿಲೇವಾರಿಗೆ ಕ್ರಮ.

ಬೆಂಗಳೂರಿನ ಹೆಚ್.ಬಿ.ಆರ್. 2ನೇ ಹಂತದ ನಿವೇಶನಗಳು

745(1089) ಶ್ರೀ ಆರ್. ಅಶೋಕ್ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಹೆಚ್.ಬಿ.ಆರ್. 2ನೇ ಹಂತದಲ್ಲಿರುವ ನಿವೇಶನಗಳು ಯಾರ ವ್ಯಾಪ್ತಿಗೆ ಬರುತ್ತವೆ (ವಿವರ ನೀಡುವುದು)

ಆ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ನಿವೇಶನಗಳು ಹಾಗೂ ಬ್ಯಾಟರಾಯನಪುರ ಸಿ.ಎಂ.ಸಿ. ವ್ಯಾಪ್ತಿಗೆ ಬರುವ ನಿವೇಶನಗಳ ಕಂದಾಯ ಹಾಗೂ ಖಾತಾ ಬದಲಾವಣೆಯನ್ನು ಮಾಡದಿರಲು ಕಾರಣವೇನು?

ಇ) ಇದರಿಂದ ಸರ್ಕಾರಕ್ಕೆ ಸಾರ್ವಜನಿಕರಿಂದ ಬರಬೇಕಾದ ಕಂದಾಯ ವಸೂಲಾಗುತ್ತಿಲ್ಲದಿರುವುದಕ್ಕೆ ಕಾರಣವೇನು?

ಈ) ಸಂಬಂಧಪಟ್ಟವರ ವ್ಯಾಪ್ತಿಗೆ ಬರುವ ಕಡತಗಳನ್ನು ಇದುವರೆವಿಗೂ ಏಕೆ ವಹಿಸಿಕೊಟ್ಟಿರುವುದಿಲ್ಲ. ಇದಕ್ಕೆ ಕಾರಣಗಳೇನು? ಮತ್ತು ಎಷ್ಟು ದಿವಸಗಳಲ್ಲಿ ವಹಿಸಿ ಕೊಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಹೆಚ್.ಬಿ.ಆರ್. 2ನೇ ಹಂತದಲ್ಲಿರುವ ನಿವೇಶನಗಳು ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬ್ಯಾಟರಾಯನಪುರ ಸಿ.ಎಂ.ಸಿ. ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ವಿವರಗಳನ್ನು ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ.

ಆ) ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಗೆ ಒಳಪಟ್ಟ ಸ್ವತ್ತುಗಳ ಖಾತೆಗಳನ್ನು ಮಾಡಲಾಗುತ್ತಿದೆ. ಬ್ಯಾಟರಾಯನಪುರ ಸಿ.ಎಂ.ಸಿ. ಆಡಳಿತ ವ್ಯಾಪ್ತಿಗೆ ಒಳಪಟ್ಟ ಸ್ವತ್ತುಗಳ